ಆ) ನಿವೇಶನಗಳ ಹಂಚಿಕೆಗಾಗಿ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು ?

ಇ) ಮೇಲ್ಕಂಡ ಅವಧಿಯಲ್ಲಿ ಸರ್ಕಾರದ ವಿವೇಚನಾ ಕೋಟಾದಿಂದ ಹಂಚಿಕೆ ಮಾಡಿರುವ ನಿವೇಶನಗಳ ಸಂಖ್ಯೆ ಎಷ್ಟು? ಈ ರೀತಿ ನಿವೇಶನದ ಪಡೆದವರ ಹೆಸರು ವಿಳಾಸ, ನಿವೇಶನ ಅಳತೆ ಇತ್ಯಾದಿ ವಿವರಗಳನ್ನು ನೀಡುವುದು.

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಅಕ್ಟೋಬರ್ 1988ರ ಪ್ರಕಟಣೆಯಲ್ಲಿ 3200 ನಿವೇಶನಗಳ ಹಂಚಿಕೆಗಾಗಿ ಅಧಿಸೂಚನೆ ಹೊರಡಿಸಿದ್ದು, ಈ ಅಧಿವೇಶನ ಅಧಿಸೂಚನೆಗೆ ಎದುರಾಗಿ, 92,000 ಅರ್ಜಿಗಳನ್ನು ಸ್ವೀಕರಿಸ ಲಾಗಿತ್ತು, ಈ ಅಧಿಸೂಚನೆಗೆ ಅನುಗುಣವಾಗಿ 2625 ನಿವೇಶನಗಳನ್ನು ಹಂಚಿಕೆ ಮಾಡಿದ್ದು ಬಾಕಿ ಉಳಿದ 575 ನಿವೇಶನಗಳನ್ನು 1998ರ ಜನವರಿಯಿಂದ 1999ರ ಜನವರಿ ವರೆಗೆ ಹಂಚಿಕೆ ಮಾಡಲಾಗಿರುತ್ತದೆ.

ಆ) ಮೇಲಿನ ಅವಧಿಯಲ್ಲಿ ಅಂದರೆ ಜನವರಿ 98ರಿಂದಜನವರಿ 99ರವರೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಏಪ್ರಿಲ್-98ರ ನಿವೇಶನ ಹಂಚಿಕೆ ಪ್ರಕಟಣೆಗೆ ಅನುಗುಣವಾಗಿ 1300 ನಿವೇಶನಗಳಿಗೆ ಒಟ್ಟು 5923 ಅರ್ಜಿಗಳನ್ನು ಸ್ವೀಕರಿಸಿದೆ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ನಿಯಮ 1984 ರಡಿಯಲ್ಲಿ ಸರ್ಕಾರದ ವಿವೇಚನಾ ಪ್ರವರ್ಗವೆಂದು ಇರುವುದಿಲ್ಲ. ಮೇಲಿನ ಅವಧಿಯಲ್ಲಿ ವಿವೇಚನಾ ಪ್ರ ವರ್ಗದಡಿ ಯಾವುದೇ ನಿವೇಶನಗಳನ್ನು ಅಧಿಸೂಚನೆಗೆ ಎದುರಾಗಿ ಹಂಚಿಕೆಮಾಡಿರುವುದಿಲ್ಲ.

ವಿಟ್ಲ ವಿಧಾನ ಸಭಾ ಕ್ಷೇತ್ರದಲ್ಲಿ ನೆಕ್ಕರ ಕಾಡು ಮತ್ತು ಉಳಿಯತಡ್ಕ ಅಣೆಕಟ್ಟುಗಳ ದುರಸ್ತಿ

307 (467) ಶ್ರೀ .ಎ.ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಣ್ಣ ನೀರಾವರಿ ಅಂತರ್ಜಲ ಅಭಿವೃದ್ಧಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) 1998-99ರ ಸಾಲಿನಲ್ಲಿ ವಿಟ್ಲ ವಿಧಾನ ಸಭಾ ಕ್ಷೇತ್ರದ ನೆಕ್ಕರೆಕಾಡು ಮತ್ತು ಉಳಿಯತಡ್ಕ ಅಣೆಕಟ್ಟುಗಳ ದುರಸ್ತಿಗಾಗಿ ಒದಗಿಸಿದ ಹಣ ಎಷ್ಟು? ಬಿಡುಗಡೆ ಮಾಡಿದ ಹಣ ಎಷ್ಟು? ಖರ್ಚು ಮಾಡಲಾದ ಹಣ ಎಷ್ಟು?

2) ಈ ಎರಡೂ ಅಣೆಕಟ್ಟುಗಳ ದುರಸ್ತಿಕಾರ್ಯ ಎರಡು ಪೂರ್ಣಗೊಳಿಸುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

1) 1998-99ರ ಸಾಲಿನಲ್ಲಿ

	ನೆಕ್ಕರೆಕಾಡು ಕಿಂಡಿ ಅಣೆಕಟ್ಟು	ಉಳಿಯತಡ್ಕ ಕಿಂಡಿ ಅಣೆ ಕಟ್ಟು ರೂ. ಲಕ್ಷಗಳಲ್ಲಿ
1) ದುರಸ್ತಿಗಾಗಿಒದಗಿಸಲಾದ ಹಣ	1.80	1.20
2) ಬಿಡುಗಡೆ ಮಾಡಿದ ಹಣ	5.13	0.48
3) 2:99ರವರೆಗೆ ಖರ್ಚು ಮಾಡಿದ ಹಣ	5.13	0.48

2. ನೆಕ್ಕರೆಕಾಡು ಕಿಂಡಿ ಅಣೆಕಟ್ಟಿನ ದುರಸ್ತಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಉಳಿಯ ತಕ್ಕ ಕಿಂಡಿ ಅಣೆಕಟ್ಟಿನ ದುರಸ್ತಿ ಕಾಮಗಾರಿಯು ಪ್ರಗತಿಯಲ್ಲಿದ್ದು ಈ ಕಾಮಗಾರಿಯು ಪ್ರಗತಿಯಲ್ಲಿದ್ದು ಈ ಕಾಮಗಾರಿಯನ್ನುಮೇ 1999ರೊಳಗೆ ಪೂರ್ಣಗೊಳಿಸಲಾಗುವುದು.

ಬಾಗಲಕೋಟೆ ನಗರದಲ್ಲಿ ಕೇಬಲ್ ಮುಖಾಂತರ ವಿದ್ಯುತ್

308(190)ಶ್ರೀ ರಾಜಶೇಖರ್ ಶೀಲವಂತ ವೀರಣ್ಣ (ಗುಳೇದ್‌ಗುಡ್ಡ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಾಗಲಕೋಟೆ ನಗರದಲ್ಲಿನ ಎಲ್ಲಾ ರಸ್ತೆಗಳ ಬದಿಗಳಲ್ಲಿ ಹೊಸದಾಗಿ ಹಾಕಿದ ಗಿಡಗಳಿಗೆ ಸಮನಾಗಿ ವಿದ್ಯುತ್ ಕಂಬಗಳನ್ನು ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಕೆಲವೇ ತಿಂಗಳುಗಳಲ್ಲಿಕಂಬಗಳಲ್ಲಿನ ವಿದ್ಯುತ್ ತಂತಿಗಳಿಗೆ ಹೊಸದಾಗಿ ಹಾಕಿದ ಗಿಡಗಳು ಬೆಳೆದಾಗ ತಗುಲಿ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಹಾಗಿದ್ದಲ್ಲಿ ತೊಂದರೆಯನ್ನು ನಿವಾರಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು ಯಾವುವು;

ಈ) ಕಂಬಗಳ ಬದಲು ಕೇಬಲ್ ಮುಖಾಂತರ ವಿದ್ಯುತ್ ಒದಗಿಸುವ ಬಗ್ಗೆ ಪರಿಶೀಲಿಸಲಾವುದೇ?

ಶ್ರೀ ಶರಣ ಬಸಪ್ಪದರ್ಶನಾಪುರ (ಇಂಧನ ರಾಜ್ಯ ಸಚಿವರು)

ಅ) ಹೌದು.

ಆ) ಮತ್ತು ಇ) ಬಂದಿದೆ . ಆದರೆ ವಿದ್ಯುತ್ ಕಂಬಗಳನ್ನು ಮಂಡಳಿಯೇ ಮೊದಲು ಹಾಕಿದ್ದು, ಆ ಮೇಲೆ ಗಿಡಗಳನ್ನು ಬಾಗಲಕೋಟೆ ಅರಣ್ಯ ಇಲಾಖೆಯು ನೆಟ್ಟಿರುತ್ತದೆ. ಆದುದರಿಂದ ಈ ವಿಷಯದಲ್ಲಿ ಬಾಗಲಕೋಟೆ ಅರಣ್ಯ ಇಲಾಖೆಯು ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿದ್ದುಂ ಇದನ್ನು ಬಾಗಲಕೊಟೆ ನಗರಾಭಿವೃದ್ಧಿ ಪ್ರಾಧಿಕಾರದ ಗಮನಕ್ಕೆ ಮಂಡಳಿಯು ತಂದಿರುತ್ತದೆ.

ಈ) ಕೇಬಲ್ ಮುಖಾಂತರ ವಿದ್ಯುತ್ ಒದಗಿಸುವ ಕೆಲಸಕ್ಕೆ ಅತಿ ಹೆಚ್ಚು ವೆಚ್ಚ ಬೀಳುವುದರಿಂದ ಬಾಗಲಕೋಟೆ ಪ್ರಾಧಿಕಾರದ ಕಂಬಹಾಕಿ ಲೈನನ್ನು ಎಳೆಯುವ ಯೋಜನೆಯನ್ನು ಮನ್ನಣೆ ಮಾಡಿರುತ್ತಾರೆ .

ವಿಧಾನ ಸೌಧದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಭದ್ರತಾ ಸಿಬ್ಬಂದಿಗಳ ಸಂಖ್ಯೆ

309 (806)ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದ್ ಗುಡ್ಡ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಧಾನಸೌಧಕ್ಕೆ ಸಾರ್ವಜನಿಕರಿಗೆ 3- 30 ಗಂಟೆಯ ನಂತರ ಪ್ರವೇಶ ಮುಕ್ತವಲ್ಲವೆ ;

ಆ) ಹಾಗಿದ್ದರೆ ಭದ್ರತಾ ಸಿಬ್ಬಂದಿಗಳು ವಿಧಾನ ಸೌಧಕ್ಕೆ ಬರುವ ಸಾರ್ವಜನಿಕರನ್ನು 3- 30 ಗಂಟೆಯ ನಂತರ ಪಾಸನ್ನು ಪಡೆದಿರುವವರನ್ನು ಮಾತ್ರ ಬಿಡಲಾಗುವುದು ಎಂದು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;